ಈ ಬಗ್ಗೆ ಸರ್ಕಾರ ನಿಗಾವಹಿಸಬೇಕಾಗಿದೆ. ಏಕೆಂದರೆ ಇದರಲ್ಲಿ ದೊಡ್ಡ ಅವ್ಯವಹಾರವೇ ನಡೆಯುತ್ತಿದೆ.

ಶ್ರೀ ಬಿ.ಎನ್.ಬಚ್ಚೇಗೌಡ : ಖರೀದಿಗೆ ಸ್ಪೇ ಕೊಡಲಾಗಿದೆ.

(ಜ) ಯೂನಿವರ್ಸಿಟಿಮೈಸ್ ರಿಸರ್ವೇಶನ್ ಕೊಡುವ ಬಗ್ಗೆ ಹಾಗೂ ಕುಡಿಯುವ ನೀರಿನ ಸಮಸ್ಯೆ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ ವಿಧಾನಸಭಾ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ನಾನು ಈಗ ಹೇಳುವ ವಿಷಯ ವಿಧಾನ ಸಭೆಯಲ್ಲಿ ಈಗಾಗಲೇ ಅನೇಕ ಬಾರಿ ಚರ್ಚೆಯಾಗಿದೆ. ಯೂನಿವರ್ಸಿಟಿಮೈಸ್ ರಿಸರ್ವೇಶನ್ ಕೊಡಬೇಕು ಎಂದಾಗ ಸರ್ಕಾರ ಕೂಡ ಅದಕ್ಕೆ ಒಪ್ಪಿಕೊಂಡಿತು. ಈಗಾಗಲೇ ಅದು ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ಹಾಗೂ ಬೇರೆ ಕಡೆಗಳಲ್ಲಿ ಇದೆ. ಒಪ್ಪಿಕೊಂಡ ನಂತರ ಈ ರೀತಿ ಮಾಡಲು ಆರ್ಟಿಕಲ್ 371ಕ್ಕೆ ಅಮೆಂಡ್‌ಮೆಂಟ್ ಮಾಡಬೇಕು ಎಂದರು. ಇದನ್ನು ಕೇಂದ್ರ ಸರ್ಕಾರ ಮಾಡಬೇಕು. ಈ ರೀತಿ ಅಮೆಂಡ್‌ಮೆಂಟ್ ಮಾಡಬೇಕೆಂದು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಹೋಗಬೇಕು. ಇದರ ಬಗ್ಗೆ ವಿಧಾನ ಸಭೆಯಲ್ಲಿ ಹೇಳಿಕೆ ಕೊಡದಿದ್ದರೂ ಕೂಡ ಸರ್ಕಾರ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಪತ್ರವನ್ನು ಬರೆದಿದ್ದೇವೆ ಎನ್ನುವ ಹೇಳಿಕೆಯನ್ನು ಕೊಟ್ಟರು. ಆದರೆ ನಾನು ವಿಚಾರಿಸಿದ್ದೇನೆ, ಇಲ್ಲಿಯವರೆಗೂ ಕೂಡ ಆ ರೀತಿಯ ಪತ್ರ ಬರೆದಿಲ್ಲ. ಆದರೂ ಕೂಡ ಈಗೇನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎಂದಿದ್ದಾರೆ ಆ ಪತ್ರದ ಪ್ರತಿಯನ್ನು ನಮಗೆ ಕೊಟ್ಟರೆ ನಾವೇ ಕೇಂದ್ರ ಸರ್ಕಾರಕ್ಕೆ ಡೆಲಿಗೇಶನ್ ಹೋಗುತ್ತೇವೆ.

8.20 ಪಿ.ಎಂ

ಪ್ರತೀ ಸಲ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವುದಾಗಲಿ, ರೈಲ್ವೆ ವಲಯದ ಬಗ್ಗೆ ಆಗಲೀ, ನಾವು ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಡೆಲಿಗೇಷನ್ ಹೋಗುತ್ತೇವೆಂದು ಹೇಳುತ್ತಾರೆ. ಆದರೆ ಈ ವಿಷಯದಲ್ಲಿ ಏಕೋ ಡೆಲಿಗೇಷನ್ ಹೋಗುತ್ತಿಲ್ಲ, ಪತ್ರವನ್ನೂ ಸಹ ಬರೆದಿಲ್ಲ. ಆ ದೃಷ್ಟಿಯಿಂದ ಸರ್ಕಾರದವರು ಪತ್ರ ಬರೆದು ಅದರ ಪ್ರತಿಯನ್ನು ಕೊಟ್ಟರೆ ನಾವೇ ಕೇಂದ್ರ ಸರ್ಕಾರಕ್ಕೆ ಹೋಗಿ ಪಾರ್ಲಿಮೆಂಟ್‌ನಲ್ಲಿ ಆ ಬಿಲ್ ಇಟ್ಟು ಅಮೆಂಡ್‌ಮೆಂಟ್ ಮಾಡುವುದಕ್ಕೆ ಒತ್ತಾಯ ತರುತ್ತೇವೆ. ಆದ್ದರಿಂದ, ರಾಜ್ಯ ಸರ್ಕಾರದಿಂದ ಆ ಪತ್ರವನ್ನು ಕೊಡಬೇಕು. ಇನ್ನು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದ್ದು, ಅಲ್ಲಿ ಜಿಲ್ಲಾ ಪರಿಷತ್ತಿನವರು ಕಳಪೆ ದರ್ಜೆಯ ಪೈಪುಗಳು ಮತ್ತು ಇನ್ನಿತರ ಮೆಟೀರಿಯಲ್ಸ್‌ನ್ನು ಕೊಂಡುಕೊಳ್ಳುತ್ತಾರೆ ಮತ್ತು ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ತಾಲ್ಲೂಕು ಅಧಿಕಾರಿಗಳು ಇರುತ್ತಾರೆ. ಪ್ರತಿಯೊಂದು ಕಡೆಯೂ ಕುಡಿಯುವ ನೀರಿನ ಸಲುವಾಗಿ ಎಷ್ಟೇ ಯೋಜನೆಗಳನ್ನು ಪೂರ್ಣ ಮಾಡಿದರೂ ಅದು ಕಳಪೆ ದರ್ಜೆಯ ಪೈಪು ಮತ್ತು ಬೇರೆ ಮೆಟೀರಿಯಲ್ಸ್‌ನ್ನು ಅಳವಡಿಸುವುದರಿಂದಾಗಿ ಕೊಳವೆ ಬಾವಿಗಳು ಮರುದಿವಸವೇ ಫೈಲ್ ಆಗುತ್ತವೆ. ಇದು ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿನ ಜಿಲ್ಲಾ ಪರಿಷತ್ತಿನ ಪರಿಸ್ಥಿತಿ ಆಗಿದೆ. ಗುಲ್ಬರ್ಗಾ ಜಿಲ್ಲಾ ಪರಿಷತ್ತಿನಲ್ಲಿ ಯಾವುದೇ ಫೈಲುಗಳನ್ನು ಪರಿಷತ್ತಿನ ಅಧ್ಯಕ್ಷರಿಗೆ ಕಳುಹಿಸದೇ ಅಲ್ಲಿಯ ಮುಖ್ಯ ಕಾರ್ಯದರ್ಶಿಯೇ ಫೈನಲೈಜ್ ಮಾಡಿ ಕಳುಹಿಸುತ್ತಾನೆ. ಒಂದು ಫೈಲ್ ಕೂಡ ಅಲ್ಲಿಯ ಅಧ್ಯಕ್ಷರಿಗೆ ಕಳುಹಿಸುವುದಿಲ್ಲ ಮತ್ತು

ಯಾವ ವಿಷಯದಲ್ಲೂ ಕೂಡ ಅಧ್ಯಕ್ಷರನ್ನು ಕೇಳುವುದಿಲ್ಲ. ಯಾರಾದರೂ ಎಂ.ಎಲ್.ಎ. ಅಥವಾ ಸಚಿವರುಗಳು ಫೋನ್ ಮಾಡಿದರೆ 'ಯಸ್ ಸರ್' ಎಂದು ಹೇಳಿ ಫೋನನ್ನು ಕೆಳಗಿಡುವ ಸಮಯದಲ್ಲಿ ಬಹಳ ರಭಸದಿಂದ ಇಟ್ಟು ನಾಲಾಯಕ್ ಎಂದು ಏನೇನೋ ಮಾತನಾಡುತ್ತಾನೆ. ಅಂಥ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಇಟ್ಟುಕೊಂಡು ಇದ್ದಾರೆ. ಮಾನ್ಯ ಅಧ್ಯಕ್ಷರೆ ತಾವು ಗಮನಕೊಡಬೇಕು.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಇಷ್ಟು ಹೊತ್ತು ಮಾತನಾಡಿದರೆ ಅಧ್ಯಕ್ಷರು ಏನು ಮಾಡಬೇಕು ಹೇಳಿ.

ಶ್ರೀ ವೈಜನಾಥ್ ಪಾಟೀಲ್ : ನಾನು ಆ ಅಧಿಕಾರಿಯ ವರ್ತನೆ ಬಗ್ಗೆ ಹೇಳುತ್ತಿದ್ದೇನೆ. ತಾವು ದಯಮಾಡಿ ನಾನು ಹೇಳುವುದನ್ನು ಕೇಳಿರಿ.

ಅಧ್ಯಕ್ಷರು : ಈಗ ಯೂನಿವರ್ಸಿಟಿ ವಿಚಾರ ಹೇಳಿದಿರಿ, ಬೋರ್‌ವೆಲ್ ಬಗ್ಗೆ ಹೇಳಿದಿರಿ, ಅಧಿಕಾರಿ ವರ್ತನೆ ಬಗ್ಗೆ ಹೇಳುತ್ತಿದ್ದೀರಿ, ಹೀಗೆ ಎಲ್ಲಾ ಒಂದೇ ಸಲಕ್ಕೆ ಇಷ್ಟೊಂದು ವಿಷಯಗಳನ್ನು ಹೇಳಿದರೆ ಯಾರು ಉತ್ತರ ಕೊಡುತ್ತಾರೆ?

ಶ್ರೀ ವೈಜನಾಥ್ ಪಾಟೀಲ್ : ಉತ್ತರ ಕೊಡುವುದಿಲ್ಲ. ತಮ್ಮ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ. ಸರ್ಕಾರದವರು ಉತ್ತರ ಕೊಡುವುದಿಲ್ಲ ಅದು ಆಗುವುದೂ ಇಲ್ಲ ಅದು ನನಗೆ ಗೊತ್ತಿದೆ. ಸಭೆಯ ಗಮನಕ್ಕೆ ತರಬೇಕೆನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ. ಗುಲ್ಬರ್ಗಾ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯ ವಿರುದ್ಧ ಯುನಾನಿಮಸ್ ರೆಸಲ್ಯೂಷನ್ ಪಾಸ್ ಆಗಿದೆ. ಕಾಂಗ್ರೆಸ್, ಲೋಕಶಕ್ತಿ, ಬಿಜೆಪಿ, ಜನತಾದಳ, ಕಮ್ಯುನಿಸ್ಟ್ ಹೀಗೆ ಎಲ್ಲಾ ಪಕ್ಷಗಳ ಸದಸ್ಯರಿಂದ ಅವರನ್ನು ತೆಗೆಯಬೇಕೆಂದು ರೆಸಲ್ಯೂಷನ್ ಪಾಸ್ ಆಗಿದ್ದರೂ ಕೂಡ ಇವತ್ತಿನವರೆಗೆ ಕೂಡ ತೆಗೆದು ಹಾಕುವುದಕ್ಕೆ ಸರ್ಕಾರ ತಯಾರಿಲ್ಲ. ಅವರ ಮೇಲೆ ಸರ್ಕಾರಕ್ಕೆ ಇಷ್ಟೊಂದು ಪ್ರೇಮ ಏತಕ್ಕೆಂದು ಗೊತ್ತಿಲ್ಲ. ಆ ಅಧಿಕಾರಿಯ ವರ್ತನೆ ಹೇಗಿದೆಯೆಂದರೆ ಒಬ್ಬ ಮಂತ್ರಿ ಫೋನ್ ಮಾಡಿದರೂ ಕೂಡ 'ಯಸ್'ಎಂದು ಹೇಳಿ ಫೋನ್ ಕೆಳಗಿಟ್ಟು ನಂತರ ಏನೋ ಅವರ ಮೇಲೆ ಕಾಮೆಂಟ್ ಮಾಡುತ್ತಿರುತ್ತಾರೆ. ಇಂಥವರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಕಾಳಜಿವಹಿಸಬೇಕು. ಮೊದಲು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ ಲೋಕಶಕ್ತಿ ಪಕ್ಷದವರು ಇದ್ದರು. ಆ ಅಧ್ಯಕ್ಷರ ಕಛೇರಿಗೆ ಈ ಸಿ.ಇ.ಓ. ಹೋಗುತ್ತಿರಲಿಲ್ಲ. ಅಧ್ಯಕ್ಷರೇ ಈ ಸಿ.ಇ.ಒ.ರವರ ಕಛೇರಿಗೆ ಬರಬೇಕು.ಇವತ್ತು ಕೂಡ ಒಂದು ಫೈಲ್ ಸಹ ಮುಖ್ಯ ಕಾರ್ಯದರ್ಶಿಯಿಂದ ಅಧ್ಯಕ್ಷರ ಕಛೇರಿಗೆ ಹೋಗುತ್ತಿಲ್ಲ. ಈಗ ನಮ್ಮ ತಾಲ್ಲೂಕಿನವರು ಒಬ್ಬರು ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿದ್ದಾರೆ. ಹಾಗಾಗಿ ಅಲ್ಲಿಯ ವಿಚಾರ ನನಗೆ ಗೊತ್ತಾಗಿದೆ. ಆ ದೃಷ್ಟಿಯಿಂದ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಹೆಚ್.ಜಿ.ಆರ್.ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಮೂರು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ರೀಜಿನಲ್ ರಿಸರ್ವೇಷನ್ ಪ್ರಕಾರವಾಗಿ ಸರ್ಕಾರಿ ನೌಕರಿಗೆ ಮತ್ತು ಪ್ರೊಫೆಶನಲ್ ಕಾಲೇಜುಗಳಿಗೆ ರಿಕ್ರೂಟ್‌ಮೆಂಟ್ ಮುಖಾಂತರ ಸೆಲೆಕ್ಷನ್ ಮಾಡುವುದರ ಬಗ್ಗೆ ಹೇಳಿದ್ದಾರೆ. ಈ ವಿಚಾರವನ್ನು ಮಾಡಬೇಕೆಂದು ಸರ್ಕಾರ ತೆರೆದ

ಮನಸ್ಸಿನಿಂದ ಇದೆ. ಇನ್‌ಫ್ಯಾಕ್ಟ್ ನಮ್ಮ ಶ್ರೀ ಬಸವರಾಜರಾಯರೆಡ್ಡಿ ಅವರು ಇನಿಷಿಯೇಟೀವ್ ತೆಗೆದುಕೊಂಡು ದಿನಾಂಕ 7, 8 ಮತ್ತು 9ರಂದು ದೆಹಲಿಯಲ್ಲಿ ಕರ್ನಾಟಕ ರಾಜ್ಯದ ಸಮಸ್ಯೆ ಬಗ್ಗೆ ಚರ್ಚೆ ಮಾಡುವ ಸಲುವಾಗಿ ನಮ್ಮ ಕೆಲವು ಮಂತ್ರಿಗಳ ಸಭೆಯನ್ನು ಕರೆದಿದ್ದಾರೆ. ಅಲ್ಲಿ ನಡೆಯುವ ಸಭೆಗೆ ರಾಜ್ಯದ ಗೃಹಮಂತ್ರಿಯಾಗಿ ನಾನು ಕೂಡ ಅಟೆಂಡ್ ಆಗುತ್ತಿದ್ದೇನೆ. ಅದರಲ್ಲಿ this is on the agenda. We are urging the Union Government to amend the Constitution and also to provide a provision for this kind of a reservation. ಇನ್ನು ಎರಡನೆಯದಾಗಿ, ತಮಗೆ ಗೊತ್ತಿರುವ ಹಾಗೆ ಕ್ವಾಲಿಟಿ ಇಲ್ಲದಿರತಕ್ಕಂಥ ಕೊಳವೆ ಪೈಪುಗಳನ್ನು ಅನೇಕ ಜಿಲ್ಲಾ ಪರಿಷತ್ತುಗಳಲ್ಲಿ ಪೂರೈಕೆ ಮಡುತ್ತಿದ್ದಾರೆ ಎನ್ನುವುದೆಲ್ಲಾ ನಮ್ಮ ಗಮನಕ್ಕೆ ಬಂದಿರುವಂಥ ವಿಚಾರವಾಗಿದೆ. ಇಂಥ ಅವ್ಯವಹಾರಗಳೆನ್ನೆಲ್ಲ ಸರಿಪಡಿಸಬೇಕೆಂಬ ಉದ್ದೇಶದಿಂದಲೇ ಅಧಿಕಾರ ವಿಕೇಂದ್ರೀಕರಣ ಮಾಡಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಸದಸ್ಯರು ಎಂದು ಮಾಡಿರುವಂಥದ್ದು ಆಗಿರುತ್ತದೆ. ಅವರ ಹಂತದಲ್ಲಿ ಇದು ಆಗದಿರುವಾಗ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಮತ್ತು ಸ್ಪೆಸಿಫಿಕ್ ಆಗಿ ಒಬ್ಬ ಅಧಿಕಾರಿಯನ್ನು ತೆಗೆದುಹಾಕುವ ಬಗ್ಗೆ ಒಂದು ನಿರ್ಣಯ ಮಾಡಿದ್ದೇವೆಂದು ಹೇಳಿದ್ದಾರೆ. ನಾನು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮತ್ತು ಸಂಬಂಧಪಟ್ಟ ಮಂತ್ರಿಗಳ ಜೊತೆಗೆ ಮಾತನಾಡಿ ಆ ಕಳಪೆ ಕೊಳವೆಗಳನ್ನು ತೆಗೆದುಕೊಂಡಿರತಕ್ಕಂಥದ್ದರ ಬಗ್ಗೆ ಸರ್ಕಾರದಿಂದ ಕ್ರಮ ತೆಗೆದುಕೊಳ್ಳಲಾಗುವುದು ಎನ್ನುವ ಭರವಸೆ ಕೊಡುತ್ತೇನೆ ಮತ್ತು ಆ ಅಧಿಕಾರಿಯ ತಪ್ಪು ಇದ್ದರೆ ಅದನ್ನು ಸರಿಪಡಿಸತಕ್ಕಂಥ ಭರವಸೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ನೀಡುತ್ತೇನೆ.

(ಟಿ) ಸಿಟಿ ರೈಲ್ವೆ ನಿರ್ಮಾಣಗಳ ಕುರಿತು

SRI JOSI A. FERNANDEZ : As a corollary to what I have said earlier to Mr.Rajanna, Mr.Shivaraj and the response from the Hon.Minister. I would like to suggest that the work on the Railway track which passes through certain areas should be stopped forthwith. The tremendous conjestion in the area, the exposure of the poor people to the hazards of the pollution, has to be imagined, because as it is, it is difficult to negotiate these roads, particularly in the roads in K.G.Halli, Venkateshpuram, Nagavara, Tannery Road, it is impossible to negotiate the road, Inconvenience as it is. I would request the Hon.Minister to come along with me in my car to see how the conditions of the roads makes it impossible. K.R.Puram can be a junction for Salem-Bangalore or the old Banaswadi Station. There is no need to connect the City with Banaswadi for the simple reason neither the goods traffic nor the passenger traffic is sufficient potential to justify the inconvenience, the health hazard that will expose the weaker sections of the population in the City, most of them are revenue pockets, highly